KSFC/HO/MD/ED(F)/600/2009-10 Date : 28.07.2009

**CIRCULAR No.868**

**Sub : Implementation of Interest Subsidy Scheme of GoK for ST Entrepreneurs.**

**-:o:0:o:-**

The Government of Karnataka vide its GO No.SWD 76 SLP 2008 Bangalore dated 15.07.2009 has approved the implementation of interest subsidy scheme for ST entrepreneurs. Under this scheme, the Corporation will sanction loans with normal applicable rate of interest. The difference between the lending rate of KSFC and effective rate of 4% to the borrowers will be met through interest subsidy by GoK. A copy of the Government Order is enclosed for reference.

A note was placed before the EC in its meeting held on 24.07.2009 and the EC has approved the implementation of the scheme, as per the terms and conditions mentioned in the said GO. The contents of this circular shall be brought to the notice of all the concerned in your office / department.

Sd/-

Encl: As above. **MANAGING DIRECTOR**

All BMs
All ZMs / DGMs of Super 'A' Branches / IA cells
All Principal Officers / Section Heads in HO
All General Managers
Library

Executive Directors - for information

<u>ಕರ್ನಾಟಕ ಸರ್ಕಾರದ ನಡವಳಿ</u>

ವಿಷಯ : 2008–09ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡ ಉದ್ಯಮ ಶೀಲರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ರಿಯಾಯಿತಿ ಬಡ್ಡಿದರದಲ್ಲಿ ಸಾಲ ನೀಡುವ ಬಗ್ಗೆ.

ಓದಲಾಗಿದೆ: (1) ಪವಕನಿ:ಗಿಉಯೋ:ಸಿಆರ್18/2008–09 ದಿನಾಂಕ: 24–02–2009 ಮತ್ತು 30–04–2009.

(2) ಸರ್ಕಾರಿ ಆದೇಶ ಸಂ:ಸಕಇ 76 ಎಸ್‌ಎಲ್‌ಪಿ 2008 ದಿನಾಂಕ 05.06.2009.

(3) ತಿದ್ದುಪಡಿ ಸಂ: ಸಕಇ 76 ಎಸ್‌ಎಲ್‌ಪಿ 2008 ದಿನಾಂಕ 06–07–2009.

<u>ಪ್ರಸ್ತಾವನೆ</u>:–

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು ಇದರ ವತಿಯಿಂದ ಪರಿಶಿಷ್ಟ ಜಾತಿಯ ಉದ್ಯಮ ಶೀಲರಿಗೆ ಶೇ.4ರ ಬಡ್ಡಿ ದರದಲ್ಲಿ ಸಾಲವನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ : ಸಕಇ 122 ಎಸ್‌ಎಲ್‌ಪಿ 2006 ದಿನಾಂಕ: 05.03.2007ರ ಮುಖಾಂತರ 2006–07ನೇ ಸಾಲಿಗೆ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಈ ಯೋಜನೆಯನ್ನು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೂ ವಿಸ್ತರಿಸಿ ವೆಚ್ಚವನ್ನು 2008–09ನೇ ಸಾಲಿನ ಗಿರಿಜನ ಉಪಯೋಜನೆಯಡಿ ಕ್ರೋಢೀಕರಿಸಿದ ಅನುದಾನದಲ್ಲಿ ಮರುಹಂಚಿಕೆ ಮಾಡಿದ ರೂ.100.00 ಲಕ್ಷಗಳಿಂದ ಭರಿಸಲು ಮೇಲೆ ಓದಲಾದ (1)ರ ಪತ್ರದಲ್ಲಿ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರು ಸರ್ಕಾರದ ಆದೇಶ ಕೋರುತ್ತಾ, ದಿನಾಂಕ: 01–04–2008 ರಿಂದ 31–03–2009 ಅವಧಿಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಪರಿಶಿಷ್ಟ ವರ್ಗಗಳ 16 ಉದ್ಯಮಿಗಳಿಗೆ ಒಟ್ಟು ರೂ.369.4 ಲಕ್ಷಗಳ ಸಾಲವನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಆ ಮೇರೆಗೆ ಮೇಲೆ (2) ಮತ್ತು (3) ರಲ್ಲಿ ಓದಲಾದ ಆದೇಶ ಹಾಗೂ ತಿದ್ದುಪಡಿ ಹೊರಡಿಸಲಾಗಿತ್ತು. ಆದಾಗ್ಯೂ ಕೆಲವು ನ್ಯೂನ್ಯತೆಗಳು ಇರುತ್ತವೆ.

ಆ ಹಿನ್ನಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ : ಸಕಇ 76 ಎಸ್‌ಎಲ್‌ಪಿ 2008 ಬೆಂಗಳೂರು, ದಿನಾಂಕ 15–07–2009</u>**

ದಿನಾಂಕ: 05–06–2009ರ ಆದೇಶ ಹಾಗೂ ದಿನಾಂಕ : 06–07–2009ರ ತಿದ್ದುಪಡಿ ಇವುಗಳನ್ನು ರದ್ದುಗೊಳಿಸುತ್ತಾ ಪರಿಶಿಷ್ಟ ವರ್ಗದ ಉದ್ಯಮ ಶೀಲರಿಗೆ ಪ್ರಥಮ ಬಾರಿಗೆ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆ ಸ್ಥಾಪಿಸಲು ಉತ್ತೇಜನೆ ನೀಡುವ ಸಲುವಾಗಿ ಶೇ.4ರಷ್ಟು ಬಡ್ಡಿಯ ದರದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸಾಲ ಒದಗಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ವಿಧಿಸುವ ಬಡ್ಡಿ ದರಕ್ಕೂ ವ್ಯತ್ಯಾಸದ ಬಡ್ಡಿ ದರಕ್ಕೂ ಗಿರಿಜನ ಉಪಯೋಜನೆಯಡಿ ಈ ಕಾರ್ಯಕ್ರಮಕ್ಕೆ ನಿಗಧಿಪಡಿಸಿರುವ ರೂ.100.00 ಲಕ್ಷಗಳ ಅನುದಾನದಿಂದ ಪಾವತಿಸಲು, ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಸಂಬಂಧ ವೆಚ್ಚವನ್ನು 2008–09ನೇ ಸಾಲಿನ ಗಿರಿಜನ ಉಪಯೋಜನೆಯಡಿ ಹಂಚಿಕೆಯಾದ ಅನುದಾನದಲ್ಲಿ ಭರಿಸತಕ್ಕದ್ದು.

ಈ ಯೋಜನೆಯ ಲಾಭವನ್ನು ಕೆಳಕಂಡ ಅರ್ಹತೆವುಳ್ಳವರು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ.



(1)ಪ್ರವರ್ತಕರು ಮೊದಲ ಸಂತತಿ ಪ್ರವರ್ತಕರಾಗಿರಬೇಕು.

(2)ಕರ್ನಾಟಕ ಸರ್ಕಾರದಿಂದ ಪ್ರಕಟಿಸಲಾಗಿರುವ ಇತರೆ ಯೋಜನೆಯಡಿ ಬಡ್ಡಿ ರಿಯಾಯಿತಿಯನ್ನು ಈಗಾಗಲೇ ಪಡೆದಿದ್ದಲ್ಲಿ, ಅಂತಹ ಪ್ರವರ್ತಕರು ಈ ಯೋಜನೆಯಡಿ ಬಡ್ಡಿ ರಿಯಾಯಿತಿ ಪಡೆಯಲು ಅರ್ಹರಿರುವುದಿಲ್ಲ.

(3)ಸೇವಾ ಕ್ಷೇತ್ರದ ಘಟಕಗಳು ಕೂಡ ಬಡ್ಡಿ ರಿಯಾಯಿತಿ ಪಡೆಯಲು ಅರ್ಹರಿರುತ್ತಾರೆ.

(4)ಸದರಿ ಯೋಜನೆಯಡಿ ಬಡ್ಡಿ ರಿಯಾಯಿತಿ ಪಡೆಯಲು ಪ್ರವರ್ತಕರು ಸಾಲ ಮರುಪಾವತಿಯಲ್ಲಿ ಸುಸ್ತಿರಹಿತರಾಗಿರತಕ್ಕದ್ದು.

(5)ಸದರಿ ಯೋಜನೆಯಡಿ ಬಡ್ಡಿ ರಿಯಾಯಿತಿಯು ಸಾಲ ವಿತರಣೆಯಾದ ಮೊದಲ ಐದು ವರ್ಷಗಳಿಗೆ ಸಾಲ ಬಾಕಿಯ ಮೊತ್ತಕ್ಕೆ (ಲೋನ್ ಬ್ಯಾಲೆನ್ಸ್) ಮಾತ್ರ ಅನ್ವಯಿಸುತ್ತದೆ.

(6)ಸಾಲದ ಮೊತ್ತ ರೂ.5.00 ಲಕ್ಷಗಳನ್ನು ಮೀರಿರತಕ್ಕದ್ದು. ಹಾಲಿ ಇರುವ ಘಟಕದ ಪ್ರವರ್ತಕರು ತಮ್ಮ ಘಟಕವನ್ನು ಮೇಲ್ದರ್ಜೆಗೇರಿಸಲು / ಆಧುನಿಕರಣಗೊಳಿಸಲು, ವೈದ್ಯರು ಹಾಗೂ ಪಶುವೈದ್ಯರು ಪಡೆಯುವ ಸಾಲದ ಕನಿಷ್ಟ ಮಿತಿಯು ರೂ.2.00 ಲಕ್ಷ ಗಳಷ್ಟಿರತಕ್ಕದ್ದು.

(7)ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ವಿಧಿಸುತ್ತಿರುವ ಪ್ರಸ್ತುತ ಬಡ್ಡಿದರ ಹಾಗೂ ಸರ್ಕಾರ ಭರಿಸುವ ವ್ಯತ್ಯಾಸವಿರುವ ಬಡ್ಡಿ ದರದ ವಿವರವು ಈ ಕೆಳಕಂಡಂತಿದೆ.

| ಸಾಲದ ವರ್ಗ | ಕ.ರಾ.ಹ.ಸಂ.ಯು ವಿಧಿಸುವ ಬಡ್ಡಿ ದರ (ನಿವ್ವಳ) | ರಾಜ್ಯ ಸರ್ಕಾರವು ಭರಿಸಲಿರುವ ವ್ಯತ್ಯಾಸವಿರುವ ಬಡ್ಡಿ ದರ | ಪ್ರವರ್ತಕರು ಒಟ್ಟಾರೆ ಭರಿಸುವ ಬಡ್ಡಿ ದರ |
|---|---|---|---|
| ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆದಾರರಿಗೆ ನೀಡಲಾಗುವ ಸಾಲಗಳು | 14.00 | 10.00 | 4.00 |

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಆಯಾಯ ಸಾಲದ ವರ್ಗದಡಿ ಸದರಿ ಯೋಜನೆಯಡಿ ಸಾಲ ಮಂಜೂರು ಮಾಡುವ ಸಮಯದಲ್ಲಿ ಪ್ರವರ್ತಕರಿಗೆ ಸಂಸ್ಥೆಯು ವಿಧಿಸುವ ಬಡ್ಡಿ ದರವನ್ನು ವಿಧಿಸುತ್ತದೆ. ಮೂರು ತಿಂಗಳಿಗೊಮ್ಮೆ ವ್ಯತ್ಯಾಸದ ಬಡ್ಡಿ ದರವನ್ನು ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ವಿತರಿಸಿದ ನಂತರ ಅದನ್ನು ಪ್ರವರ್ತಕರಿಗೆ ನೀಡಲಾಗುವುದು.

ಇದಕ್ಕೆ ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ:ಆಇ:365:ವೆಚ್ಚ-3:2009, ದಿನಾಂಕ:02-06-2009ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/-
(ಎ.ಎಂ.ಚಿದಾನಂದಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.